**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಪ್ರಭಾಕರ್ | **PW-09** |
| **ತಂದೆಯ ಹೆಸರು** | : | ಕೆ. ಸೋಮಯ್ಯ | **CW-29** |
| **ವಯಸ್ಸು** | : | 65 ವರ್ಷ | |
| **ಉದ್ಯೋಗ** | : | ನಿವೃತ್ತ ಪಿ ಎಸ್ ಐ, | |
| **ವಾಸಸ್ಥಳ** | : | ಬೆಳ್ತಂಗಡಿ. | |

**ದಿನಾಂಕಃ01-02-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ನಾನು ದಿಃ29-06-2020 ರಿಂದ ದಿಃ31-11-2020 ರವರೆಗೂ ಶೃಂಗೇರಿ ಪೋಲೀಸ್ ಠಾಣೆಯಲ್ಲಿ, ಪಿ.ಐ ಆಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

2. ದಿಃ 29-06-2020 ರಂದು ಈ ಕೇಸಿನ ಕಡತವನ್ನು ಚಾಸಾ-28 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ, ದಿಃ27-07-2020 ರಂದು 4 ನೇ ಆರೋಪಿ/ರಾಜಶೇಖರವರು ಜಾಮೀನು ಪಡೆದುಕೊಂಡು ನನ್ನ ಮುಂದೆ ಹಾಜರಾಗಿದ್ದು, ಅವರನ್ನು ದಸ್ತಗಿರಿ ಮಾಡಿ ಅವರ ಸ್ವಯಿಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಕಡತವನ್ನು ಚಾಸಾ-30 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು 4 ನೇ ಆರೋಪಿಯ ಸ್ವಯಿಚ್ಛಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -20 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-20 (ಎ) ಎಂದು ಗುರುತಿಸಲಾಯಿತು.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ. H.R.U ವಕೀಲರಿಂದ ::**

1. 4 ನೇ ಆರೋಪಿ ನನ್ನ ಮುಂದೆ ಎಷ್ಟು ಗಂಟೆಯಿಂದ ಎಷ್ಟು ಗಂಟೆ ವರೆಗೆ ಹೇಳಿಕೆ ಕೊಟ್ಟಿರುತ್ತಾರೆಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಆರೋಪಿಯ ಸ್ವಯಿಚ್ಛಾ ಹೇಳಿಕೆಯನ್ನು ಪಡೆಯಬೇಕಾದರೆ ಪಂಚರ ಸಮಕ್ಷಮ ಮಾಡಬೇಕು ಎಂದರೆ ಸರಿ. ಆ ರೀತಿ ನಾನು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಸ್ವಯಿಚ್ಛಾ ಹೇಳಿಕೆಯನ್ನು ನಾನು ಹಗಲು ವೇಳೆಯಲ್ಲಿ ಪೋಲೀಸ್ ಠಾಣೆಯಲ್ಲಿ ದಾಖಲು ಮಾಡಿಕೊಂಡಿರುತ್ತೇನೆ. ಶೃಂಗೇರಿ ಪೋಲೀಸ್ ಠಾಣೆ ಹತ್ತಿರ ಸಾಕಷ್ಟು ವಾಹನಗಳು ಹಾಗೂ ಜನಸಂದಣಿ ಇರುತ್ತದೆ ಎಂದರೆ ಸರಿ. ನನಗೆ ಸ್ವಂತಂತ್ರ ಸಾಕ್ಷಿದಾರರನ್ನು ಪಡೆದುಕೊಳ್ಳಲು ಯಾವುದೇ ತೊಂದರೆ

ಇರಲಿಲ್ಲ ಎಂದರೆ ಸರಿ. ನಿಪಿ-20 ಅನ್ನು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-20 ರಲ್ಲಿರುವಂತಹ ಹೇಳಿಕೆ 4 ನೇ ಆರೋಪಿಯು ನನ್ನ ಸಮಕ್ಷಮ ಕೊಟ್ಟಂತರ ಹೇಳಿಕೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.